# ಬೆಳಗಾವಿಯಲ್ಲಿ ಶ್ರೀರಾಮಕೃಷ್ಣ ಮಂದಿರದ ಅಭೂತಪೂರ್ವ ಪ್ರತಿಷ್ಠಾಪನಾ ಮಹೋತ್ಸವ

ನವಯುಗಾಚಾರ್ಯ ಸ್ವಾಮಿ ವಿವೇಕಾನಂದರು ೧೮೯೨ರಲ್ಲಿ ಬೆಳಗಾವಿಗೆ ಭೇಟಿಕೊಟ್ಟು, ಮೊದಲ ಮೂರು ದಿನ ಶ್ರೀ ಭಾಟೆ ಎನ್ನುವವರ ಮನೆಯಲ್ಲಿಯೂ ನಂತರದ ೯ ದಿನ ಶ್ರೀ ಹರಿಪದ ಮಿತ್ರ ಎನ್ನುವ ಮಹನೀಯರ ಮನೆಯಲ್ಲಿಯೂ ಇದ್ದರು.

ಶ್ರೀಹರಿಪದ ಮಿತ್ರರ ಮನೆಯನ್ನು ಕರ್ನಾಟಕದ ಘನಸರ್ಕಾರ ಜೂನ್ ೨೦೦೦ರಲ್ಲಿ ರಾಮಕೃಷ್ಣ ಮಿಷನ್ನಿಗೆ ಕೊಡಮಾಡಿತು. ಈಗ ಅದನ್ನು ವಿವೇಕಾನಂದ ಸ್ಮಾರಕವನ್ನಾಗಿ ನವೀಕರಣಗೊಳಿಸಲಾಗಿದೆ. ಕಳೆದ ಮೂರು ವರ್ಷಗಳಿಂದ ಆಶ್ರಮದ ಇತರ ಕಟ್ಟಡಗಳ ನಿರ್ಮಾಣ ಕಾರ್ಯ ಆಶ್ರಮದ ಮುಖ್ಯಸ್ಥರಾದ ಸ್ವಾಮಿ ಪುರುಷೋತ್ತಮಾನಂದಜಿಯವರ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಬಿರುಸಿನಿಂದ ಸಾಗಿ, ಕಡೆಯ ಹಂತವಾದ ಪ್ರಾರ್ಥನಾ ಮಂದಿರ ಮತ್ತು ಕಾರ್ಯಾಲಯ ಸಮುಚ್ಚಯವು ಇದೇ ಜನವರಿ ೨೩ರಂದು ಉದ್ಘಾಟಿಸಲ್ಪಟ್ಟಿತು.

ಜನವರಿ ೨೧ರಿಂದ ೨೫ರವರೆಗೆ ಮಂದಿರ ಪ್ರತಿಷ್ಠಾಪನಾ ಮಹೋತ್ಸವವು ವಿಜೃಂಭಣೆಯಿಂದ ನಡೆಯಿತು. ಕರ್ನಾಟಕ ಮತ್ತು ಮಹಾರಾಷ್ಟ್ರಗಳೂ ಸೇರಿದಂತೆ ವಿವಿಧ ಎಡೆಗಳಿಂದ ಬಂದಿದ್ದ ಮೂರು ಸಾವಿರಕ್ಕೂ ಹೆಚ್ಚು ಭಕ್ತಾದಿಗಳಲ್ಲದೆ, ಭಾರತದ ಉದ್ದಗಲಗಳಲ್ಲಿರುವ ರಾಮಕೃಷ್ಣ ಮಹಾಸಂಘದ ಶಾಖೆಗಳಿಂದ ಬಂದಿದ್ದ ೨೦೦ಕ್ಕೂ ಹೆಚ್ಚು ಸಾಧುಬ್ರಹ್ಮಚಾರಿಗಳ ಉಪಸ್ಥಿತಿ ಮಹೋತ್ಸವಕ್ಕೆ ಮೆರಗು ನೀಡಿದ್ದಲ್ಲದೆ ಇಡೀ ವಾತಾವರಣವನ್ನು ಪವಿತ್ರಮಯಗೊಳಿಸಿತ್ತು.

**೨೧.೦೧.೨೦೦೪ :** ಮಹೋತ್ಸವದ ಉದ್ಘಾಟನಾ ಸಮಾರಂಭವು ಸಂಜೆ ೪.೩೦ಕ್ಕೆ ಆರಂಭವಾಗಿ ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಗೌತಮಾನಂದಜಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸ್ವಾಮಿ ಜಗದಾತ್ಮಾನಂದಜಿಯವರು ತಮ್ಮ ಅಪೂರ್ವ ವಾಕ್‌ಝರಿಯ ಮೂಲಕ ಸಂಘಟನೆಯು ಶಕ್ತಿಯಾಗಿ ಹೇಗೆ ಮಾರ್ಪಡಬಲ್ಲುದು ಎಂದು ತಿಳಿಸಿದರೆ, ಅಥಣಿಯ ಶ್ರೀಪ್ರಭು ಚನ್ನಬಸವ ಸ್ವಾಮೀಜಿಯವರು ತಮ್ಮ ಓಜಸ್ವೀ ಭಾಷಣದಲ್ಲಿ ಸಮಾಜ ಪರಿವರ್ತನೆಗೆ ಆಧ್ಯಾತ್ಮಿಕ ಮುಖಂಡರು ಒಂದುಗೂಡಿ ಮುಂದಾಗಬೇಕಾದ ಆವಶ್ಯಕತೆಯನ್ನು ಒತ್ತಿಹೇಳಿದರು. ಸ್ವಾಮಿ ನಿಖಿಲೇಶ್ವರಾನಂದಜಿಯವರು ರಾಮಕೃಷ್ಣ ಮಹಾಸಂಘದ ವೈಶಿಷ್ಟ್ಯದ ಬಗ್ಗೆಯೂ ಸ್ವಾಮಿ ಆತ್ಮಾರಾಮಾನಂದಜಿಯವರು ಸಂಸ್ಕೃತಿ ಮತ್ತು ಧರ್ಮಗಳ ನಡುವಿನ ಅನ್ಯೋನ್ಯ ಸಂಬಂಧದ ಬಗೆಗೂ ತಿಳಿಸಿಕೊಟ್ಟರು. ಸಂಜೆ ೭.೩೦ಕ್ಕೆ ನಡೆದ ಶ್ರೀ ಚೋಟೇ ರೆಹಮಾನ್ ಖಾನ್‌ರವರ ಸಿತಾರ್ ಮತ್ತು ಶ್ರೀ ಪ್ರವೀಣ್ ಗೋಡ್‌ಖಿಂಡಿ ಅವರ ಕೊಳಲು ಜುಗಲ್ ಬಂದಿ ಕಾರ್ಯಕ್ರಮವು ಭಕ್ತರನ್ನು ರಂಜಿಸಿತು.

**೨೨.೦೧.೨೦೦೪ :** ಗುರುವಾರ ಸಂಘಜನನಿಯಾದ ಶ್ರೀಮಾತೆ ಶಾರದಾದೇವಿಯವರ ದಿನವನ್ನಾಗಿ ಆಚರಿಸಲಾಯಿತು. ಬೆಳಗ್ಗೆ ೧೧.೩೦ಕ್ಕೆ ನಡೆದ ಬೆಳಗಿನ ಸಮಾವೇಶದ ಅಧ್ಯಕ್ಷತೆಯನ್ನು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸ್ಮರಣಾನಂದಜಿಯವರು ವಹಿಸಿದ್ದರು. ಸ್ವಾಮಿ ಜಿತಕಾಮಾನಂದಜಿಯವರು ಚಿಕ್ಕ ಚಿಕ್ಕ ಘಟನೆಗಳ ಮೂಲಕ ಶ್ರೀಮಾತೆಯವರ ಹಿರಿಮೆಯನ್ನು ಕೊಂಡಾಡಿದರೆ, ಸ್ವಾಮಿ ಜಿತಾತ್ಮಾನಂದಜಿಯವರು ಜಗಜ್ಜನನಿ ಶ್ರೀಶಾರದಾದೇವಿ ಮತ್ತು ಲೋಕಮಾತಾ ಭಗಿನಿ ನಿವೇದಿತೆಯರ ನಡುವಿನ ತಾಯಿಮಗುವಿನ ಸಂಬಂಧವನ್ನು ಮತ್ತು ಅದನ್ನು ಬೆಸೆಯುವುದರಲ್ಲಿ ಸ್ವಾಮಿ ವಿವೇಕಾನಂದರ ಪಾತ್ರವನ್ನೂ ಹೃದಯಸ್ಪರ್ಶಿಯಾಗಿ ವಿವರಿಸಿದರು. ಸ್ವಾಮಿ ಶಶಾಂಕಾನಂದಜಿಯವರು ಶ್ರೀಮಾತೆ ಮತ್ತು ಶ್ರೀರಾಮಕೃಷ್ಣರ ದಿವ್ಯ ಬಾಂಧವ್ಯವನ್ನು ವರ್ಣಿಸಿದರು.



ಸ್ವಾಮಿ ವಿವೇಕಾನಂದರು ೧೮೯೨ರಲ್ಲಿ ಬೆಳಗಾವಿಯಲ್ಲಿ ಉಳಿದುಕೊಂಡಿದ್ದ ಹಳೆಯ ಕಟ್ಟಡ ಹಾಗೂ ರಾಮಕೃಷ್ಣ ಮಿಷನ್ನಿನ ನೂತನ ಕಟ್ಟಡ

ಮಧ್ಯಾಹ್ನ ನಡೆದ ಎರಡನೆಯ ಸಮಾವೇಶವು ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ಗೀತಾನಂದಜಿ ಮಹಾರಾಜ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ತಮ್ಮ ದಿವ್ಯ ಜನ್ಮಕರ್ಮಗಳಿಂದ ಜಗತ್ತಿಗೇ ಮಂಗಳವನ್ನುಂಟುಮಾಡಿದ ಮಹಾತಾಯಿಯ ಸ್ಮರಣೆಯನ್ನು ಸ್ವಾಮಿ ರಾಘವೇಶಾನಂದರು ಮಾಡಿದರೆ, ಬೆಳಗಾವಿಯ ನೆಲದಲ್ಲಿ ಭವ್ಯ ರಾಮಕೃಷ್ಣ ಆಶ್ರಮದ ಸ್ಥಾಪನೆಯೇ ಶ್ರೀಮಾತೆಯವರ ಮಾತೃತ್ವದ ಮಹಿಮೆಗೆ ದ್ಯೋತಕ ಎಂದು ಹುಬ್ಬಳ್ಳಿಯ ಶ್ರೀ ಚಂದ್ರಶೇಖರ ಸ್ವಾಮೀಜಿಯವರು ಕೊಂಡಾಡಿದರು. ಮರಾಠಿಯಲ್ಲಿ ಸ್ವಾಮಿ ವಿಷ್ಣುಪಾದಾನಂದಜಿ ಮತ್ತು ಇಂಗ್ಲೀಷಿನಲ್ಲಿ ಸ್ವಾಮಿ ಗೋಕುಲಾನಂದಜಿಯವರು ಶ್ರೀಮಾತೆಯವರ ದಿವ್ಯವ್ಯಕ್ತಿತ್ವದ ವಿವಿಧ ಆಯಾಮಗಳನ್ನು ಪರಿಚಯಿಸಿದರು. ಸಂಜೆ ಶ್ರೀರಾಮಾಕಾಂತ ಗುಂಡೇಚಾ ಮತ್ತು ಶ್ರೀ ಉಮಾಕಾಂತ ಗುಂಡೇಚಾ ಅವರು ಧ್ರುಪದ್ ಶೈಲಿಯ ಶಾಸ್ತ್ರೀಯ ಸಂಗೀತ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

**೨೩.೦೧.೨೦೦೪ :** ಸ್ವಾಮಿ ಬ್ರಹ್ಮಾನಂದರ ಪುಣ್ಯಜಯಂತಿಯ ಈ ದಿನ, ಬೆಳಗಾವಿಯ ಇತಿಹಾಸದಲ್ಲೇ ಚಿರಸ್ಮರಣೀಯ. ಮುಂಜಾನೆಯ ಮುಸುಕಿನಲ್ಲಿಯೇ ನೂತನ ಮಂದಿರದ ಆವರಣದಲ್ಲಿ ದಾರಿಯ ಇಕ್ಕೆಡಗಳಲ್ಲೂ ಸಾವಿರಾರು ಭಕ್ತರು ನೆರೆದಿದ್ದರೆ, ಭಸ್ಮಧಾರಿಗಳಾದ ನೂರಾರು ಸಾಧುಬ್ರಹ್ಮಚಾರಿಗಳು ಭಗವನ್ನಾಮ ಸಂಕೀರ್ತನೆಯಲ್ಲಿ ಮೈಮರೆತಿದ್ದರು. ಸರಿಯಾಗಿ ಬೆಳಗ್ಗೆ ೬.೩೦ಕ್ಕೆ ಈ ಮುಂಚೆ ಪೂಜಾಮಂದಿರದಲ್ಲಿದ್ದ ದಿವ್ಯತ್ರಯರ ಮತ್ತು ಸ್ವಾಮಿ ಬ್ರಹ್ಮಾನಂದರ ಭಾವಚಿತ್ರಗಳನ್ನು ಹೊತ್ತು, ಛತ್ರಿ ಚಾಮರಗಳ ಗೌರವದೊಂದಿಗೆ ಹಿರಿಯ ಯತಿಶ್ರೇಷ್ಠರು ಮುನ್ನಡೆದರು. ಅವರನ್ನು ಹಿಂಬಾಲಿಸಿ ಕ್ರಮವಾಗಿ ವೇದಘೋಷಮಾಡುತ್ತಿದ್ದ, ಧ್ವಜಗಳನ್ನು ಹಿಡಿದಿದ್ದ ಮತ್ತು ಭಗವನ್ನಾಮ ಸಂಕೀರ್ತನೆಯೊಂದಿಗೆ ಅಮೋಘವಾಗಿ ನರ್ತಿಸುತ್ತಿದ್ದ ಸಾಧು ಬ್ರಹ್ಮಚಾರಿವೃಂದ ಸಾಗಿತ್ತು. ನೂತನ ಮಂದಿರವನ್ನು ಮೂರು ಬಾರಿ ಮೆರವಣಿಗೆಯೊಂದಿಗೆ ಪ್ರದಕ್ಷಿಣೆ ಮಾಡಿದ ನಂತರ, ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಗೀತಾನಂದಜಿ ಮಹಾರಾಜ್ ಅವರು ಮಂದಿರದ ಉದ್ಘಾಟನೆಯನ್ನು ಮಾಡಿದರು. ನಂತರ ಹಿರಿಯ ಯತಿಗಳು ಹೊತ್ತುತಂದಿದ್ದ ದಿವ್ಯತ್ರಯರ ಚಿತ್ರಗಳನ್ನು ನೂತನ ಪೂಜಾಗೃಹದಲ್ಲಿ ಸಂಸ್ಥಾಪಿಸಿ ಶಂಕುಸ್ಥಾಪನೆ ಮಾಡಿ, ಶ್ರೀರಾಮಕೃಷ್ಣರಿಗೆ ಆರತಿ ಮಾಡಿದರು. ನೆರೆದಿದ್ದ ಸಾಧುಗಳು ಪುಷ್ಪಾರ್ಚನೆಯನ್ನು ಸಮರ್ಪಿಸುವುದರ ಮೂಲಕ ಆ ಪರಮಪುಣ್ಯ ಸಂದರ್ಭ ಸಂಪನ್ನಗೊಂಡಿತು.

ಶ್ರೀರಾಮಕೃಷ್ಣರ ಜೀವನ ಸಂದೇಶಗಳ ವಿಶೇಷ ಗೋಷ್ಠಿ ಈ ದಿನ



ಬೆಳಗಾವಿ ರಾಮಕೃಷ್ಣ ಮಿಷನ್ನಿನ ನೂತನ ಪ್ರಾರ್ಥನಾ ಮಂದಿರ

ನಡೆಯಿತು. ಬೆಳಗ್ಗೆ ಹತ್ತುಗಂಟೆಗೆ ನಡೆದ ಮೊದಲನೆಯ ಸಮಾವೇಶದ ಅಧ್ಯಕ್ಷತೆಯನ್ನು ಸ್ವಾಮಿ ಮುಮುಕ್ಷಾನಂದಜಿಯವರು ವಹಿಸಿದ್ದರು. ಸ್ವಾಮಿ ಪರಮಾರ್ಥಾನಂದಜಿಯವರು ರಾಮಕೃಷ್ಣ ವಚನವೇದದ ಪ್ರತಿಯೊಂದು ಪುಟದಲ್ಲಿಯೂ ವಿನೋದ ಹಾಸ್ಯ ಇವೆ ಎಂದು ತಿಳಿಸುತ್ತ, ಅದರ ಮೂಲಕ ಶ್ರೀರಾಮಕೃಷ್ಣರು ವಿವೇಕವನ್ನು ಬೋಧಿಸಿದ ಬಗೆಯನ್ನು ರಸವತ್ತಾಗಿ ಬಣ್ಣಿಸಿದರು. ಗದಗದ ಶ್ರೀ ತೋಂಟದ ಸಿದ್ಧಲಿಂಗ ಸ್ವಾಮೀಜಿಯವರು ದೇವತಾರ್ಚನೆಯು ದೈವತ್ವಕ್ಕೆ ಏರುವ ಮಾರ್ಗದಲ್ಲಿ ಮೆಟ್ಟಿಲು ಹೇಗಾಗುವುದೆಂದು ವಿಶದಪಡಿಸಿದರು. ಸ್ವಾಮಿ ಜಿತಾತ್ಮಾನಂದಜಿಯವರು ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಅನುಭವಗಳ ದಿವ್ಯ ಅನುಭೂತಿಯನ್ನು ಬಣ್ಣಿಸಿದರೆ, ಶ್ರೀರಾಮಕೃಷ್ಣರ ಮಾನಸಪುತ್ರರೆನಿಸಿದ ಸ್ವಾಮಿ ಬ್ರಹ್ಮಾನಂದರ ಆಧ್ಯಾತ್ಮಿಕ ಮೇರು ವ್ಯಕ್ತಿತ್ವದ ಪರಿಚಯವನ್ನು ಸ್ವಾಮಿ ನಿಖಿಲೇಶ್ವರಾನಂದಜಿಯವರು ಮಾಡಿದರು.

ಸಂಜೆಯ ಸಮಾವೇಶದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ಶ್ರೀ ವಿ.ವಿ. ಭಾಸ್ಕರ್ ಬೆಳಗಾವಿಯಲ್ಲಿ ಮಂದಿರ ನಿರ್ಮಾಣದ ಹಿಂದೆ ಇರುವ ಸ್ವಾಮಿ ಪುರುಷೋತ್ತಮಾನಂದಜಿಯವರ ಅದಮ್ಯ ಚೇತನಾ ಶಕ್ತಿಯನ್ನು ಕೊಂಡಾಡಿದರು ಮತ್ತು ಇತರ ಯತಿವರೇಣ್ಯರು ಶ್ರೀರಾಮಕೃಷ್ಣರ ಭಾವ ಸಾಮ್ರಾಜ್ಯದ ಹಲವು ಮಜಲುಗಳನ್ನು ಪರಿಚಯಿಸಿದರು. ನಂತರ ಶ್ರೀಮತಿ ವಾಣಿ ಜಯರಾಮ್ ಅವರು ತಮ್ಮ ಭಕ್ತಿಸಂಗೀತದ ಮೂಲಕ ಭಕ್ತರನ್ನು ಭಾವುಕರನ್ನಾಗಿಸಿದರು.

**೨೪.೦೧.೨೦೦೪ :** ಇಂದು ಸ್ವಾಮಿ ವಿವೇಕಾನಂದರ ದಿನವನ್ನಾಗಿ ಆಚರಿಸಲಾಯಿತು. ಸ್ವಾಮಿ ಸ್ಮರಣಾನಂದಜಿಯವರ ಅಧ್ಯಕ್ಷತೆಯಲ್ಲಿ ನಡೆದ ಬೆಳಗಿನ ಸಮಾವೇಶದಲ್ಲಿ ಸ್ವಾಮಿ ಜಗದಾತ್ಮಾನಂದಜಿಯವರು ಸ್ವಾಮಿ ವಿವೇಕಾನಂದರ ಉಜ್ವಲವಾದ ಭವಿಷ್ಯಭಾರತದರ್ಶನವನ್ನು ಸಭಿಕರಿಗೆಲ್ಲ ಮಾಡಿಸಿದರೆ, ಸ್ವಾಮಿ ನಿಖಿಲೇಶ್ವರಾನಂದಜಿಯವರು ಬಾಲಕ ನರೇಂದ್ರ ಜಗದ್ವಿಖ್ಯಾತ ವಿವೇಕಾನಂದರಾದ ಪರಿಯನ್ನು ವರ್ಣಿಸಿದರು. ಸ್ವಾಮಿ ಬ್ರಹ್ಮೇಶಾನಂದರು ಸ್ವಾಮಿ ವಿವೇಕಾನಂದರ ಸಂದೇಶದಲ್ಲಿನ ಚಾರಿತ್ರ್ಯನಿರ್ಮಾಣದ ಅಂಶಕ್ಕೆ ಒತ್ತುಕೊಟ್ಟರೆ, ಸ್ವಾಮೀಜಿಯವರ ಶಕ್ತಿ ಸಂದೇಶದ ಉದ್ಘೋಷವನ್ನು ಸ್ವಾಮಿ ಗೋಕುಲಾನಂದರು ಮಾಡಿದರು. ಸ್ವಾಮಿ ಸ್ಮರಣಾನಂದಜಿಯವರು ಸ್ವಾಮೀಜಿಯವರ ಕರ್ಮಯೋಗ ಸಂದೇಶದ ಮಹತ್ತ್ವವನ್ನು ವಿವರಿಸಿದರು.

ಸಂಜೆಯ ಸಮಾವೇಶವು ಸ್ವಾಮಿ ತತ್ತ್ವಬೋಧಾನಂದಜಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಸ್ವಾಮಿ ಗೌತಮಾನಂದಜಿಯವರು ದಿವ್ಯ ತ್ರಯರು ಒಂದೇ, ಬೇರೆ ಬೇರೆ ಅಲ್ಲ. ಅವರೆಲ್ಲರ ಪ್ರತಿರೂಪ ಸ್ವಾಮೀಜಿ ಎನ್ನುವುದನ್ನು ಸರಳಸುಂದರ ಭಾಷೆಯಲ್ಲಿ ತಿಳಿಸಿದರೆ, ಸ್ವಾಮಿ ಆತ್ಮಾರಾಮಾನಂದಜಿಯವರು ತಮ್ಮ ವಿದ್ವತ್‌ಪೂರ್ಣ ಪ್ರವಚನದಲ್ಲಿ ಸ್ವಾಮಿ ವಿವೇಕಾನಂದರಲ್ಲಿ ಕಾಣಬರುವ ಪೌರ್ವಾತ್ಯ ಮತ್ತು ಮತ್ತು ಪಾಶ್ಚಾತ್ಯ ಸಂಸ್ಕೃತಿಗಳ ಅಪೂರ್ವ ಸಂಗಮವನ್ನು ವಿಶದಪಡಿಸಿದರು. ಸ್ವಾಮಿ ವಿಪಾಪ್ಮಾನಂದಜಿಯವರು ಎಚ್ಚೆತ್ತ ಭಾರತದ ಹಿಂದಿನ ಸ್ವಾಮೀಜಿಯವರ ಪ್ರೇರಣಾಶಕ್ತಿಯ ಸ್ಮರಣೆ ಮಾಡಿದರು.

**೨೪.೦೧. ೨೦೦೪ :** ಇಂದು ಬೆಳಗ್ಗೆ ಮುಕ್ತಾಯ ಸಮಾರಂಭ ಜರುಗಿತು. ಸ್ವಾಮಿ ಪ್ರಭಾನಂದಜಿಯವರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದವರು ಕೇಂದ್ರ ಯೋಜನಾ ಆಯೋಗದ ಸದಸ್ಯ ರಾದ ಶ್ರೀ ಸೋಮಪಾಲ್ ಅವರು. ರಾಮಕೃಷ್ಣ ಮಹಾಸಂಘ ಮತ್ತು ಅದರ ಧ್ಯೇಯೋದ್ದೇಶಗಳ ಬಗ್ಗೆ ಸ್ವಾಮಿ ರಾಘವೇಶಾನಂದಜಿ, ಸ್ವಾಮಿ ಶಶಾಂಕಾನಂದಜಿ ಮಾತನಾಡಿದರೆ, ರಾಮಕೃಷ್ಣ ವಿವೇಕಾನಂದ ವಿಚಾರ ಧಾರೆಯ ಮಹತ್ತ್ವವನ್ನು ಕುರಿತು ಸ್ವಾಮಿ ಶ್ರೀಕಾಂತಾನಂದರೂ, ಸಮಾಜದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಶ್ರೀರಾಮಕೃಷ್ಣ ಮಂದಿರಗಳ ಪಾತ್ರವನ್ನು ಕುರಿತು ಸ್ವಾಮಿ ಪ್ರಭಾನಂದಜಿಯವರೂ ತಿಳಿಸಿಕೊಟ್ಟರು.

**ವೈಶಿಷ್ಟ್ಯ :** ಇಲ್ಲಿನ ಮಂದಿರ ಪ್ರತಿಷ್ಠಾಪನಾ ಮಹೋತ್ಸವದ ವೈಶಿಷ್ಟ್ಯವೆಂದರೆ, ಬೆಳಗ್ಗೆ, ಮಧ್ಯಾಹ್ನ ಎಡೆಬಿಡದೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು, ಅಚ್ಚುಕಟ್ಟಾಗಿ ಇದ್ದ ಊಟೋಪಚಾರ, ವಸತಿ ಮತ್ತು ಸಾರಿಗೆ ವ್ಯವಸ್ಥೆಗಳು, ನಗುಮುಖವನ್ನು ಹೊತ್ತು ಅಹರ್ನಿಶಿ ದುಡಿಯುತ್ತಿದ್ದ ಆಶ್ರಮದ ಬ್ರಹ್ಮಚಾರಿಗಳು ಮತ್ತು ಸ್ವಯಂಸೇವಕರು, ಎಲ್ಲ ಸಹಕಾರ ಮತ್ತು ಸಾಧನಗಳನ್ನು ಕಲ್ಪಿಸಿದ ಬೆಳಗಾವಿಯ ಸೇನಾ ವಿಭಾಗದವರು ಮತ್ತು ನಗರ ಪಾಲಿಕೆಯವರು.

ಕನ್ನಡಿಗರು, ಮರಾಠಿಗರು ಒಂದುಗೂಡಿ ಮಹೋತ್ಸವದ ಯಶಸ್ಸಿಗೆ ದುಡಿದರು. ಶ್ರೀರಾಮಕೃಷ್ಣರ ಸಾವಿರಾರು ಭಕ್ತರು ಸಮಾವೇಶಗೊಂಡಿದ್ದ ಇಲ್ಲಿ ಜಾತಿ, ಪ್ರಾಂತ್ಯ ಭಾಷೆಗಳ ಕಟ್ಟು ಒಡೆದು ಹೋಗಿದ್ದನ್ನು ಕಾಣಬಹುದಿತ್ತು. ಸೌಹಾರ್ದತೆಯೇ ಭಾಷೆಯಾಗಿ, ಭಕ್ತಿಯೇ ಭಾವವಾಗಿ ಉಳ್ಳ ವಿಶ್ವಭಾತೃತ್ವ ಇಲ್ಲಿ ಒಡಮೂಡಿತ್ತು. ◆

## ದೈವಲೀನರಾದ ಅಧ್ಯಯನಶೀಲೆ ಗಾರ್ಗಿ

ಸ್ವಾಮಿ ವಿವೇಕಾನಂದರ ಚಿಂತನೆಗಳ ಸಂಶೋಧನೆಗೆ ಖ್ಯಾತರಾಗಿ, ಸೋದರಿ ಗಾರ್ಗಿಯೆಂದೇ ಜನಪ್ರಿಯರಾಗಿದ್ದ ಮೇರಿ ಲೂಯಿ ಬರ್ಕ್‌ರವರು ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೋನ ವೇದಾಂತ ಸೊಸೈಟಿಯ ತಮ್ಮ ನಿವಾಸದಲ್ಲಿ ಕಳೆದ ಜನವರಿ ೨೦ರಂದು ಮಂಗಳವಾರ ನಿಧನರಾದರು. ವಿವೇಕಾನಂದರ ವೇದಾಂತ ವಿಚಾರಗಳಲ್ಲಿ ವಿಶೇಷವಾದ ಆಸ್ಥೆ, ಒಲವುಗಳಿದ್ದ ಇವರಿಗೆ ೯೩ ವರ್ಷಗಳಾಗಿದ್ದವು. ಖ್ಯಾತ ಪತ್ರಕರ್ತೆಯಾಗಿದ್ದ ಇವರು ತಮ್ಮ ತಾರುಣ್ಯದಲ್ಲೇ ರಾಮಕೃಷ್ಣ-ವಿವೇಕಾನಂದ ಭಾವಧಾರೆಯೆಡೆ ವಿಶೇಷವಾಗಿ ಆಕರ್ಷಿತರಾಗಿದ್ದು, ಸ್ವಾಮಿ ಅಶೋಕಾನಂದರಿಂದ ಮಂತ್ರದೀಕ್ಷೆಯನ್ನು ಪಡೆದಿದ್ದರು. ತಮ್ಮ ಇಡೀ ಬದುಕನ್ನು ಪಶ್ಚಿಮದಲ್ಲಿ ವಿವೇಕಾನಂದರ ಕಾರ್ಯದ ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದ ಈಕೆಯ ಅಧ್ಯಯನದ ಫಲವೇ **ಪಶ್ಚಿಮದಲ್ಲಿ ಸ್ವಾಮಿ ವಿವೇಕಾನಂದರು : ನೂತನ ಆವಿಷ್ಕಾರಗಳು** ಎಂಬ ಆರು ಸಂಪುಟಗಳು. ಸೋದರಿ ಗಾರ್ಗಿಯವರಿಗೆ ಸ್ವಾಮಿ ವಿವೇಕಾನಂದರ ಮೇಲಿನ ಅಧ್ಯಯನಕ್ಕಾಗಿ ಕಲ್ಕತ್ತೆಯ ರಾಮಕೃಷ್ಣ ಮಿಷನ್ ಇನ್‌ಸ್ಟಿಟ್ಯೂಟ್‌ನಿಂದ ನೀಡಲ್ಪಡುವ ಮೊಟ್ಟಮೊದಲ ಪುರಸ್ಕಾರ ದೊರಕಿತ್ತು. ◆

## ಜ್ಞಾನವಾಹಿನಿ ವರದಿ

ದಿನಾಂಕ ೨೫.೧೨.೨೦೦೩ರಿಂದ ೨೧.೧.೨೦೦೪ರವರೆಗೆ ಗದಗ ಜಿಲ್ಲೆಯ ವಿವಿಧೆಡೆಗಳಲ್ಲಿ ಜ್ಞಾನವಾಹಿನಿ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದುವು. ಸುಮಾರು ೨೭ ಶಾಲಾ ಕಾಲೇಜುಗಳಲ್ಲಿ ೬೨ ವ್ಯಕ್ತಿತ್ವ ವಿಕಸನ ಚಲನಚಿತ್ರ ಪ್ರದರ್ಶನಗಳು ನಡೆದು ಅದರ ಪ್ರಯೋಜನವನ್ನು ಸುಮಾರು ೧೧,೦೦೦ಕ್ಕೂ ಹೆಚ್ಚು ವಿದ್ಯಾರ್ಥಿ ವಿದ್ಯಾರ್ಥಿನಿಯರು ಪಡೆದುಕೊಂಡಿದ್ದಾರೆ. ಅದಲ್ಲದೆ ಬೆಳಗ್ಗೆ ನಡೆದ ಮೆರವಣಿಗೆಯಲ್ಲಿ ಸುಮಾರು ೬,೦೦೦ ವಿದ್ಯಾರ್ಥಿ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದು ಸಂಜೆಯ ಸತ್ಸಂಗಗಳಲ್ಲಿ ೨೦೦೦ಕ್ಕೂ ಹೆಚ್ಚು ಸ್ಥಳೀಯರು ಪಾಲ್ಗೊಂಡಿದ್ದರು. ◆

# ಶ್ರೀರಾಮಕೃಷ್ಣ ವಿದ್ಯಾಶಾಲೆಯ ಸಂಭ್ರಮದ ಸುವರ್ಣ ಯಾತ್ರೆ

ಶ್ರೀಮತ್ ಸ್ವಾಮಿ ಶಾಂಭವಾನಂದಜಿಯವರ ಕನಸಿನ ಕೂಸಾಗಿದ್ದ ಹಾಗೂ ಭಾರತದ ಪ್ರತಿಷ್ಠಿತ ಆವಾಸೀ ವಿದ್ಯಾಸಂಸ್ಥೆಗಳಲ್ಲಿ ಒಂದಾದ ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲೆ ಈಗ ಐವತ್ತು ವರ್ಷಗಳ ಇತಿಹಾಸವಿರುವ ಭವ್ಯ ಸಂಸ್ಥೆ. ಈ ಸುಸಂದರ್ಭವನ್ನು ಅಭೂತಪೂರ್ವ ರೀತಿಯಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು. ಜನರ ಹೃನ್ಮನಗಳನ್ನು ಗೆದ್ದ ಆಕರ್ಷಕ ಕಾರ್ಯಕ್ರಮಗಳು ಸುವರ್ಣ ಮಹೋತ್ಸವವನ್ನು ಅವಿಸ್ಮರಣೀಯವಾಗಿಸಿದುವು. ಜನವರಿ ೯ ರಿಂದ ೧೧ ೨೦೦೪ರವರೆಗೆ ಜರುಗಿದ ಮಹೋತ್ಸವದಲ್ಲಿ ಪ್ರತಿದಿನ ಸುಮಾರು ೬ ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ್ದರು ಮತ್ತು ವಿವಿಧೆಡೆಗಳಿಂದ ಬಂದ ೩೦ಕ್ಕೂ ಹೆಚ್ಚು ಸಂನ್ಯಾಸಿಗಳು ಪಾಲ್ಗೊಂಡಿದ್ದರು.



ಸುವರ್ಣಮಹೋತ್ಸವ ಕಟ್ಟಡವನ್ನು ಉದ್ಘಾಟಿಸುತ್ತಿರುವ ಶ್ರೀ ಮುರಳೀ ಮನೋಹರ ಜೋಷಿಯವರು, ಎಡದಿಂದ, ಸ್ವಾಮಿ ಸ್ಮರಣಾನಂದಜಿ, ಸ್ವಾಮಿ ಮುಕ್ತಿದಾನಂದಜಿ, ಸ್ವಾಮಿ ಆತ್ಮವಿದಾನಂದಜಿ ಮತ್ತು ಪ್ರಾಂಶುಪಾಲರಾದ ಶ್ರೀ ಬಾಲಾಜಿ.

**೦೯.೦೧.೨೦೦೪ :** ಸುವರ್ಣ ಮಹೋತ್ಸವದ ಅಂಗವಾಗಿ ನಿರ್ಮಿಸಿರುವ ಪಿ.ಯು.ಸಿ. ವಿದ್ಯಾರ್ಥಿಗಳಿಗಾಗಿನ ಸುಂದರವಾದ ಹಾಗೂ ಭವ್ಯ ವಸತಿ ಗೃಹವನ್ನು ಕೇಂದ್ರಸರ್ಕಾರದ ಮಾನವ ಸಂಪನ್ಮೂಲಗಳ ಸಚಿವರಾದ ಮಾನ್ಯ ಡಾ. ಮುರಳೀ ಮನೋಹರ ಜೋಷಿಯವರು ಬೆಳಗ್ಗೆ ೧೦.೩೦ರ ಸುಮಾರಿಗೆ ವಿಧ್ಯುಕ್ತವಾಗಿ ಉದ್ಘಾಟಿಸಿದರು. ಅದಕ್ಕೆ ಮುಂಚೆ ಈಗಿರುವ ಕಟ್ಟಡದಿಂದ ರಾಮಕೃಷ್ಣ ಮಹಾಸಂಘದ ಸಂನ್ಯಾಸಿಗಳು ಮತ್ತು ಗಣ್ಯರು ಭಾಗವಹಿಸಿದ್ದ ಶೋಭಾಯಾತ್ರೆಯು ಆರಂಭವಾಗಿ ವೇದಘೋಷ ಮತ್ತು ನಾದಸ್ವರದೊಂದಿಗೆ ನೂತನ ಕಟ್ಟಡವನ್ನು ತಲುಪಿತು. ಉದ್ಘಾಟನೆಯ ನಂತರ ನೂತನ ಪ್ರಾರ್ಥನಾ ಗೃಹದಲ್ಲಿ ದಿವ್ಯತ್ರಯರಿಗೆ ಆರತಿ ಜರುಗಿತು. ನಂತರ ಮುಖ್ಯಸಮಾರಂಭ ಆರಂಭವಾಯಿತು. ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್. ಎಮ್. ಕೃಷ್ಣ ಅವರು ರಾಮಕೃಷ್ಣ ವಿದ್ಯಾರ್ಥಿನಿಲಯದಲ್ಲಿ ತಾವು ಕಳೆದ ದಿನಗಳ ಸ್ಮರಣೆಯನ್ನು ಹೃದಯಂಗಮವಾಗಿ ಮಾಡಿಕೊಂಡರು. ಡಾ. ಮುರಳೀ ಮನೋಹರ ಜೋಷಿಯವರು ತಮ್ಮ ವಿದ್ವತ್ಪೂರ್ಣವಾದ ಭಾಷಣದಲ್ಲಿ ಧರ್ಮ ಮತ್ತು ವಿಜ್ಞಾನಗಳ ಸಾಮರಸ್ಯವನ್ನೂ ನಿಜವಾದ ಶಿಕ್ಷಣದ ರೂಪುರೇಖೆಯನ್ನೂ ನಮ್ಮ ಮುಂದಿಟ್ಟರು. ಈ ಸಂದರ್ಭದಲ್ಲಿ ವಿದ್ಯಾಶಾಲೆಯ ಐವತ್ತು ವರ್ಷಗಳ ಸಾಧನೆಯನ್ನು ಚಿತ್ರಿಸುವ ಸಿ.ಡಿ.ಯನ್ನು ಬಿಡುಗಡೆ ಮಾಡಲಾಯಿತು. ಮುಖ್ಯ ಅತಿಥಿಗಳಾದ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸ್ಮರಣಾನಂದಜಿಯವರು ಉತ್ತಮ ಶಿಕ್ಷಣವು ಸಮಾಜದ ಎಲ್ಲ ವರ್ಗದವರಿಗೆ ದೊರಕಬೇಕಾದ ಮಹತ್ವವನ್ನು ಒತ್ತಿ ಹೇಳಿದರು. ಸಂಜೆ ವಿದ್ಯಾಶಾಲೆಯ ಕ್ರೀಡಾಂಗಣದಲ್ಲಿ ವಿವಿಧ ವಿದ್ಯಾರ್ಥಿಗಳಿಂದ ಕವಾಯತುಗಳ ಪ್ರದರ್ಶನ ಮತ್ತು ನೂಪುರ ಎಂಬುವ ನೃತ್ಯ ಸಂಗೀತ ರೂಪಕ ಅದ್ಭುತವಾಗಿ ಮೂಡಿ ಬಂದುವು.



ನೂತನವಾಗಿ ನಿರ್ಮಿಸಿರುವ ಸುವರ್ಣಮಹೋತ್ಸವ ಕಟ್ಟಡ

**೦೯.೦೧.೨೦೦೪ :** ಇಂದು ಕಾಲೇಜಿನ ವಾರ್ಷಿಕ ದಿನವನ್ನಾಗಿ ಆಚರಿಸಲಾಯಿತು. ಬೆಳಗ್ಗೆ ಈಜುಕೊಳದಲ್ಲಿ ವಿವಿಧ ಪ್ರದರ್ಶನಗಳು ನಡೆದವು. ೧೦.೩೦ ಗಂಟೆಗೆ ನಡೆದ ಮುಖ್ಯ ಸಮಾರಂಭದಲ್ಲಿ ಭಾರತದ ರಕ್ಷಣಾ ಸಚಿವರಾದ ಶ್ರೀ ಜಾರ್ಜ್ ಫರ್ನಾಂಡಿಸ್, ವಿಧಾನ ಪರಿಷತ್ ಸದಸ್ಯ ಶ್ರೀ ಎಂ.ಸಿ. ನಾಣಯ್ಯ ಮತ್ತು ಬೆಂಗಳೂರಿನ ನಾರಾಯಣ ಹೃದಯಾಲಯದ ಮುಖ್ಯಸ್ಥ ಡಾ. ದೇವಿಪ್ರಸಾದ್ ಶೆಟ್ಟಿ ಅವರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಪ್ರಶಸ್ತಿ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು. ರಕ್ಷಣಾ ಸಚಿವರು ಸಂಕಷ್ಟದ ಸಮಯದಲ್ಲಿ ಎನ್.ಸಿ.ಸಿ. ಕೆಡೆಟ್‌ಗಳ ಸೇವೆಯನ್ನು ಶ್ಲಾಘಿಸಿ, ಶಿಕ್ಷಣದ ವ್ಯಾಪಾರೀಕರಣವನ್ನು ಖಂಡಿಸಿದರು. ಡಾ. ದೇವಿ ಪ್ರಸಾದ್ ಶೆಟ್ಟಿಯವರು ಮುಂದೆ ಬರುವ ದಿನಗಳಲ್ಲಿ ವೈದ್ಯಕೀಯ ವೃತ್ತಿಯ ಪ್ರಾಧಾನ್ಯವನ್ನು ಒತ್ತಿ ಹೇಳಿದರು. ಮಧ್ಯಾಹ್ನ ನಾರಾಯಣ ಸೇವೆ ಎಂಬ ವಿಶಿಷ್ಟ ಕಾರ್ಯಕ್ರಮದಲ್ಲಿ ೭೦೦ಕ್ಕೂ ಹೆಚ್ಚು ಬಡವಿದ್ಯಾರ್ಥಿಗಳಿಗೆ ಊಟೋಪಚಾರ ಮತ್ತು ಕೊಡುಗೆಗಳನ್ನು ವಿತರಿಸಲಾಯಿತು. ಮಧ್ಯಾಹ್ನ ೩.೩೦ಕ್ಕೆ ನಡೆದ ಸಮಾರಂಭದಲ್ಲಿ ವಿದ್ಯಾಶಾಲೆಗಾಗಿ ದುಡಿದ ಇಂದಿನ ಮತ್ತು ಹಳೆಯ ಉಪಾಧ್ಯಾಯರುಗಳನ್ನೂ ಹಾಗೂ ಇತರೆ ಸಿಬ್ಬಂದಿಯನ್ನೂ ಸನ್ಮಾನಿಸಲಾಯಿತು. ಸಂಜೆ ನಡೆದ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬೆಂಗಳೂರಿನ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಹರ್ಷಾನಂದಜಿಯವರು ಶ್ರೀರಾಮಕೃಷ್ಣ ವಿದ್ಯಾಶಾಲೆಯ ಇತಿಹಾಸದಲ್ಲಿ ಇಂದಿನಿಂದ ಸುವರ್ಣ ಯುಗ ಆರಂಭವಾಗಲಿ ಎಂದು ಆಶಿಸಿದರು. ಪ್ರಖ್ಯಾತ ನಾಟಕ ಮತ್ತು ಚಲನಚಿತ್ರ ನಿರ್ದೇಶಕ ಶ್ರೀ ಎಂ.ಎಸ್. ಸತ್ಯು ಅವರು ಮುಖ್ಯ ಅತಿಥಿಯಾಗಿದ್ದರು. **ನೃತ್ಯ ಸಂಗೀತ ಭಾರತ** ಎಂಬ ಅಮೋಘ ನೃತ್ಯರೂಪಕವನ್ನು ನೋಡಿ ಸಭಿಕರೆಲ್ಲರೂ ಆನಂದಿಸಿದರು.

**೧೧.೦೧.೨೦೦೪:** ಇಂದು ವಿದ್ಯಾಶಾಲೆಯ ಹಳೆಯ ವಿದ್ಯಾರ್ಥಿಗಳ ಮಿಲನ ಕೂಟದ ಸಂಭ್ರಮದ ದಿನ. ನಾಡಿನ ವಿವಿಧೆಡೆಗಳಿಂದ ಬಂದಿದ್ದ ಹಳೆಯ ವಿದ್ಯಾರ್ಥಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡರು. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿದ್ದವರು ಸ್ವಾಮಿ ಪ್ರಭಾನಂದಜಿ ಮತ್ತು ಸ್ವಾಮಿ ಸುರೇಶಾನಂದಜಿ. ಮುಕ್ತಾಯ ಸಮಾರಂಭವು ಸಂಜೆ ವಿದ್ಯಾಶಾಲೆಯ ಕ್ರೀಡಾಂಗಣದಲ್ಲಿ ನಡೆಯಿತು. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ಆದಿಚುಂಚನಗಿರಿ ಪೀಠದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಮುಖ್ಯ ಅತಿಥಿಗಳಾಗಿದ್ದರು. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ರಾಣಿ ಸತೀಶ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸುವರ್ಣ ಮಹೋತ್ಸವಕ್ಕೆ ಸುವರ್ಣಕಲಶಪ್ರಾಯವಾಗಿ ಇದ್ದುದು ಡಾ.ಪ್ರಭುಶಂಕರ ಅವರು ರಚಿಸಿದ **ಸರ್ವಧರ್ಮ ಸಮನ್ವಯಾಚಾರ್ಯ** ಎಂಬ ಶ್ರೀರಾಮಕೃಷ್ಣರ ಜೀವನ ಸಂದೇಶಗಳನ್ನು ಆಧರಿಸಿದ ನಾಟಕದ ಪ್ರದರ್ಶನ. ಶ್ರೀರಾಮಕೃಷ್ಣರ ದಿವ್ಯ ಜೀವನಗಾಥೆಯನ್ನು ವಿಶೇಷ ಬೆಳಕು ಮತ್ತು ಶ್ರಾವ್ಯ ಮಾಧ್ಯಮದ ನೆರವಿನಿಂದ ವಿದ್ಯಾಶಾಲೆಯ ವಿದ್ಯಾರ್ಥಿಗಳು ಪರಿಣಾಮಕಾರಿಯಾಗಿ ಅಭಿನಯಿಸಿ, ಪ್ರೇಕ್ಷಕರ ಹೃನ್ಮನಗಳನ್ನು ಗೆಲ್ಲುವಲ್ಲಿ ಯಶಸ್ವಿಯಾದರು. ◆